**ದಿನಾಂಕಃ 18-12-2019 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣೀಕರಿಸಲಾಯಿತು.**

**ಮುಂದುವೆರದ ಮುಖ್ಯ ವಿಚಾರಣೆಗೆ ಮೆಲ್ಮನವಿದಾರರ ಪರ ಶ್ರೀ ಎ.ಜಿ.ಪಿ. ವಕೀಲರಿಂದಃ**

ಒ.ಎಸ್.ನಂ.175/2011 ತೀರ್ಪಿನ ದೃಡಿಕೃತ ನಕಲು ಹಾಜರುಪಡಿಸಿದ್ದು ಅದನ್ನು ನಿಪಿ-1 ಎಂದು ಗುರುತಿಸಲಾಯಿತು. ಅದರ ಡೀಕ್ರಿ ದೃಡಿಕೃತ ನಕಲು ಹಾಜರುಪಡಿಸಿದ್ದು ಅದನ್ನು ನಿಪಿ-2 ಎಂದು ಗುರುತಿಸಲಾಯಿತು. ಸರ್ಕಾರದ ಆದೇಶದ ಪತ್ರ ನಿಪಿ-3 ಎಂದು ಗುರುತಿಸಲಾಯಿತು. ಕಚೇರಿಯ ಪತ್ರ ಅದನ್ನು ನಿಪಿ-4 ಎಂದು ಗುರುತಿಸಲಾಯಿತು. ಸದರಿ ದಾಖಲೆಗಳನ್ನು ಪುರಸ್ಕರಿಸಿ ಮೇಲ್ಮನವಿ ಸಲ್ಲಿಸಲು ಆಗಿಲ್ಲ. ಕಾಲ ವಿಳಂಬವನ್ನು ಮನ್ನಿಸಲು ಆದೇಶ ಮಾಡಬೇಕೆಂದು ಪ್ರಾರ್ಥಿಸುತ್ತೇನೆ.

**ಪಾಟೀ ಸವಾಲುಃ ಎದುರುದಾರರ ಪರ ವಕೀಲರಿಂದಃ**

ನನಗೆ ಈ ಪ್ರಕರಣದಲ್ಲಿ ನ್ನನ ಹಿಂದಿನ ದಾವಾ ನಡುವಳಿಕೆಯ ಬಗ್ಗೆ ದಾಖಲಾತಿಗಳ ಆಧಾರದ ಮೇಲೆ ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ. ಮೇಲೆ ತಿಳಿಸಿದ ದಾವಾ ತೀರ್ಪು ಆದ ನಂತರ ಸರ್ಕಾರದ ಕಾನೂನು ಇಲಾಖೆಗೆ ಅಭಿಪ್ರಾಯಕ್ಕೆ ಕಳುಹಿಸಿ ಕೊಡಲಾಯಿತು. ಅಲ್ಲಿ ಬೇರೆ ಬೇರೆ ಅಧಿಕಾರಿಗಳ ಮುಂದೆ ಪರಿಶೀಲನೆಗೆ ಹೋಗಿದ್ದು ಯೋಗ್ಯವಾಗಿದೆಯೆಂದು ಹಂತ ಹಂತವಾಗಿ ಹೋಗಿದ್ದು ಯಾವ ಅಧಿಕಾರಿಗಳ ಮುಂದೆ ಅಲ್ಲಿ ಯಾವ ಕಾರಣಕ್ಕಾಗಿ ತಡವಾಗಿದೆ ಎಂದು ನನಗೆ ಹೇಳಲಾಗುವುದಿಲ್ಲ. ಸುಮಾರು 71 ದಿವಸ ತಡವಾಗಿದೆ. ಕಡತುಗಳನ್ನು ಪರಿಶೀಲಿಸಿ ಆದ ಮೇಲೆ ನಾನು ಪ್ರಮಾಣ ಪತ್ರವನ್ನು ಸಲ್ಲಿಸಿದ್ದೇನೆ. ನನ್ನ ಪ್ರಮಾಣ ಪತ್ರದಲ್ಲಿ ತಡವಾದ ಬಗ್ಗೆ ಕಾರಣಗಳನ್ನು ಕಾಣಿಸಿಲ್ಲ ಎಂದರೆ ಸರಿಯಲ್ಲ ಬುದ್ಧ್ಯಾಪೂರ್ವಕವಾಗಿ ಮೇಲ್ಮನವಿ ಸಲ್ಲಿಸಿದಲ್ಲಿ ಯಾವುದೇ ಪ್ರಯೋಜನವಾಗುವುದಿಲ್ಲವೆಂದು ತಡವಾಗಿದೆಯೆಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ.

ಸಹಿ,
(ಸರವಣನ್ ಎಸ್)
3 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,
ರಾಣೇಬೆನ್ನೂರು.